# **2020** ರ **EIA** ಪರಿಸರ ಹಾನಿಯ ಜೊತೆಗೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಎಂಬುವುದು ಪರಿಸರವಾದಿಗಳ ವಾದ

ಪ್ರೇರಣಾ ಸಿಂಗ್ ಬಿಂದ್ರಾ ಮತ್ತು ವೈಶಾಲಿ ರಾವತ್ ಅವರಿಂದ

(ಕನ್ನಡ ಅನುವಾದ: ಹರೀಷ ಎ.ಎಸ್., ಸಂಶೋಧನಾ ವಿದ್ಯಾರ್ಥಿ)

ಮಾರ್ಚ್ 2020 ರಲ್ಲಿ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು (MoEFCC) ಪರಿಸರ ಪರಿಣಾಮದ ಮೌಲ್ಯಮಾಪನ-2020 ರ ಕರಡು ಅಧಿಸೂಚನೆಯನ್ನು ಹೊರಡಿಸಿತ್ತು. ಈ ಅಧಿಸೂಚನೆಯು ಬಹಳ ಪ್ರಮುಖವಾದದ್ದು, ಏಕೆಂದರೆ ಅಸ್ತಿತ್ವದಲ್ಲಿರುವ ಯೋಜನೆಗಳ ವಿಸ್ತರಣೆ ಸೇರಿದಂತೆ ಇತರೆ ಎಲ್ಲಾ ಹೊಸ ಯೋಜನೆಗಳಿಗೆ ಕಡ್ಡಾಯವಾಗಿ ಪರಿಸರ ಪರಿಣಾಮದ ಮೌಲ್ಯಮಾಪನ ವರದಿಯನ್ನು ನಡೆಸಬೇಕಿರುತ್ತದೆ. ಅಂದರೆ ಹೊಸ ರಸ್ತೆಗಳ ನಿರ್ಮಾಣ, ಗಣಿಗಾರಿಕೆ, ಕಾರ್ಖಾನೆಗಳು, ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕೆ ಪರಿಸರ ಮೌಲ್ಯಮಾಪನ ವರದಿಯನ್ನು ಕಡ್ಡಾಯವಾಗಿ ಮಾಡಬೇಕಾಗಿರುತ್ತದೆ. ಈ ಯೋಜನೆಗಳ ಅನುಷ್ಠಾನದಿಂದ ಪರಿಸರದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ವರದಿ ಒಳಗೊಂಡಿರುತ್ತದೆ ಮತ್ತು ಈ ವರದಿಯ ಆಧಾರದ ಮೇಲೆ ಯೋಜನೆಯನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕು MoEFCC ನ ಪರಿಗಣನೆಗೆ ಸೇರಿರುತ್ತದೆ. ಆದರೆ ವ್ಯಾಪಾರದ ಅಭಿವೃದ್ಧಿಯನ್ನು ಉತ್ತೇಜಿಸುವ ಸಲುವಾಗಿ ಪರಿಸರ ಪರಿಣಾಮದ ಮೌಲ್ಯಮಾಪನ ವಿಧಾನವನ್ನು ಸರಳೀಕರಿಸಿ ಪರಿಸರ ಸುರಕ್ಷತೆಗಳನ್ನು ಗಾಳಿಗೆ ತೂರಲಾಗಿದೆ ಎಂದು ಈ ಅಧಿಸೂಚನೆಯು ಸಾಕಷ್ಟು ಟೀಕೆಗೆ ಒಳಪಟ್ಟಿದೆ. ಇದು ಪ್ರತಿಯೊಬ್ಬ ನಾಗರಿಕನ ಸ್ವಚ್ಛ ಪರಿಸರದ ಹಕ್ಕನ್ನು ಕಡೆಗಣಿಸುತ್ತದೆ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ತಲೆ ತಗ್ಗಿಸುವಂತೆ ಮಾಡುತ್ತಿದೆ.

ನಾವು EIA ಕರಡು ಅಧಿಸೂಚನೆಯನ್ನು ಹಿಂತೆಗೆದುಕೊಳ್ಳುವಂತೆ ಕೋರಿ MoEFCC ಗೆ ಪತ್ರವೊಂದನ್ನು ಕಳುಹಿಸಿದ್ದೇವೆ. ಪರಿಸರ, ಕಾಡು, ನೈಸರ್ಗಿಕ ಪರಿಸರ ವ್ಯವಸ್ಥೆಗಳು ಮತ್ತು ವನ್ಯಜೀವಿಗಳನ್ನು ರಕ್ಷಿಸುವ ಸಲುವಾಗಿ ಈಗಾಗಲೇ ಅಸ್ತಿತ್ವದಲ್ಲಿರುವ EIA 2006 ರ ಅಧಿಸೂಚನೆಯನ್ನು ಬಲಪಡಿಸುವಂತೆ ಕೋರಿದ್ದೇವೆ. ನಮ್ಮ ಈ ಕರಡು ಅಧಿಸೂಚನೆಯ ಮೇಲಿನ ವಿಮರ್ಶೆಯು ಕಾಡು, ವನ್ಯಜೀವಿ, ನೈಸರ್ಗಿಕ ಪರಿಸರ ವ್ಯವಸ್ಥೆ, ಪೀಡಿತ ಸ್ಥಳೀಯ ಸಮುದಾಯಗಳ ಮತ್ತು ದೇಶಾದ್ಯಂತ ಇತರ ನಾಗರಿಕರ ಮೇಲೆ ಆಗಬಹುದಾದ ದುಷ್ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ. ನಮ್ಮಿಂದ ರಚಿಸಲಾದ ಪತ್ರಕ್ಕೆ (ಪ್ರೇರಣಾ ಸಿಂಗ್ ಬಿಂದ್ರಾ, ಲೇಖಕಿ, ಸಂರಕ್ಷಣಾವಾದಿ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಮಾಜಿ ಸ್ಥಾಯಿ ಸಮಿತಿಯ ಸದಸ್ಯೆ ಮತ್ತು ವೈಶಾಲಿ ರಾವತ್, ಬರಹಗಾರ್ತಿ ಮತ್ತು ಪರಿಸರ ಸಂರಕ್ಷಣಾ ತಜ್ಞೆ) 100 ಕ್ಕೂ ಹೆಚ್ಚು ಸಂಶೋಧಕರು, ಪರಿಸರ ವಿಜ್ಞಾನಿಗಳು, ಸಂರಕ್ಷಣಾ ತಜ್ಞರು ಮತ್ತು ವೃತ್ತಿಪರ ಮಿತ್ರರು ಸಹಿ ಮಾಡಿದ್ದಾರೆ. ಸಹ-ಸಹಿಗಾರರಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿ, ಹುಲಿ ಯೋಜನೆ, ಅರಣ್ಯ ಸಲಹಾ ಸಮಿತಿ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಮತ್ತು ವಿವಿಧ ರಾಜ್ಯ ವನ್ಯಜೀವಿ ಮಂಡಳಿಗಳ ಮಾಜಿ ಸದಸ್ಯರು ಹಾಗು ಮಾಜಿ ಸರ್ಕಾರಿ ಅಧಿಕಾರಿಗಳು ಸಹಿ ಮಾಡಿದ್ದಾರೆ. ಎಲ್ಲಾ ಆಸಕ್ತ ವ್ಯಕ್ತಿಗಳು ಈ ಪತ್ರವನ್ನು ಉಲ್ಲೇಖಿಸಲು ಅಥವಾ ಇದನ್ನು ಸಂಪನ್ಮೂಲವಾಗಿ ಬಳಸಲು ಮತ್ತು ತಮ್ಮದೇ ಆದ ಟಿಪ್ಪಣಿ ಗಳನ್ನು ಕಳುಹಿಸಲು ನಾವು ಪ್ರೋತ್ಸಾಹಿಸುತ್ತೇವೆ.

ಕರಡು ಅಧಿಸೂಚನೆಗಾಗಿ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು **11** ಆಗಸ್ಟ್ **2020** ರವರೆಗೆ ಸಲ್ಲಿಸಬಹುದು ಮತ್ತು ನಿಮ್ಮ ಅಭಿಪ್ರಾಯಗಳನ್ನು **eia2020-moefcc@gov.in** ಗೆ ಇಮೇಲ್ ಮಾಡಬಹುದು**.**

*EIA 2020* ಕರಡು ಅಧಿಸೂಚನೆಗೆ ನಮ್ಮ ಅಭಿಪ್ರಾಯ ತಿಳಿಸಲು ಗೋವಾ ಫೌಂಡೇಶನ್, ವಿಂಧ್ಯ ಬಚಾವೊ, ಕಾಂಚಿ ಕೊಹ್ಲಿ ಮತ್ತು ನೀತಿ ಸಂಶೋಧನಾ ಕೇಂದ್ರದ ಮಂಜು ಮೆನನ್ ಮತ್ತು ಇತರರ ಕೆಲಸಗಳನ್ನು ಬಳಸಿರುತ್ತೇವೆ. ಈ ಪತ್ರದಲ್ಲಿ ಅವರ ಕೆಲಸ ಕಾರ್ಯಗಳನ್ನು ಉಲ್ಲೇಖಿಸಿರುತ್ತೇವೆ. ಸಮಸ್ಯೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ವಿಶ್ಲೇಷಿಸಲು ಅವರು ನಮಗೆ ಸಹಾಯ ಮಾಡಿರುತ್ತಾರೆ.

ಶ್ರೀ ಪ್ರಕಾಶ್ ಜಾವಡೇಕರ್

ಸಚಿವರು, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ,

ಇಂದಿರಾ ಪರ್ಯಾವರಣ್ ಭವನ್,

ಜೋರ್ ಬಾಗ್,

ನವದೆಹಲಿ.

10 ಜುಲೈ 2020

ವಿಷಯ**:** ಪರಿಸರ ಪರಿಣಾಮದ ಮೌಲ್ಯಮಾಪನ **2020** ಕರಡು ಅಧಿಸೂಚನೆಯನ್ನು ಹಿಂಪಡೆಯುವ ಬಗ್ಗೆ ಮನವಿ

ಶ್ರೀ ಜಾವಡೇಕರ್,

2020 ರ ಮಾರ್ಚ್ 23 ರಂದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಹೊರಡಿಸಿದ ಪರಿಸರ ಪರಿಣಾಮ ಮೌಲ್ಯಮಾಪನ 2020 ರ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ, 2020 ಆಗಸ್ಟ್ 11 ರವರೆಗೆ ಸಾರ್ವಜನಿಕರ ಅಭಿಪ್ರಾಯಕ್ಕೆ ಆಹ್ವಾನಿಸಲಾಗಿದೆ. ನಾವು ಈ ವಿಷಯಕ್ಕೆ ಸಂಬಂಧಿಸಿದಂತೆ ಜವಾಬ್ದಾರಿಯುತ ನಾಗರಿಕರಾಗಿ ಈ ಪತ್ರವನ್ನು ಬರೆಯುತ್ತಿದ್ದೇವೆ.

ಪರಿಸರ ಪರಿಣಾಮದ ಮೌಲ್ಯಮಾಪನವು ಒಂದು ಅತ್ಯಂತ ಪ್ರಮುಖ ವಿಷಯವಾಗಿದ್ದು, ಅದರ ಮೂಲಕ ವಿವಿಧ ಅಭಿವೃದ್ಧಿ ಯೋಜನೆಗಳಾದ, ಭೂ ಬಳಕೆ, ಅರಣ್ಯ ಪರಿವರ್ತನೆ, ಕೈಗಾರಿಕಾ ಮಾಲಿನ್ಯ ಇತ್ಯಾದಿಗಳಿಂದ ಪರಿಸರದ ಮೇಲಾಗುವ ಪರಿಣಾಮಗಳನ್ನು ಅಧ್ಯಯನ ಮಾಡಲಾಗುತ್ತದೆ. ಈ ವರದಿಯಿಂದ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಬೇಕೇ ಅಥವಾ ತಿರಸ್ಕರಿಸಬೇಕೇ ಎಂಬುದನ್ನು ನಿರ್ಧರಿಸಲಾಗುತ್ತದೆ.

EIA 2020 ರ ಕರಡು ಅಧಿಸೂಚನೆಯನ್ನು ನಾವು ನೋಡುವ ಒಂದು ಪ್ರಮುಖ ಕೋನವೆಂದರೆ, ಅದು ಅದರ ಮೂಲ ಶಾಸನವಾದ ಪರಿಸರ ಸಂರಕ್ಷಣಾ ಕಾಯ್ದೆ-1986 ರ ಶಾಸಕಾಂಗದ ಉದ್ದೇಶಕ್ಕೆ ಅನುಗುಣವಾಗಿದೆಯೇ ಎಂಬುದು. EIA 2020 ರ ಕರಡು ಅಧಿಸೂಚನೆಯು ಅದರ ವ್ಯಾಪ್ತಿಯನ್ನು ಗಮನಾರ್ಹವಾಗಿ ಕುಂಠಿತಗೊಳಿಸುತ್ತದೆ. EIA ಪ್ರಕ್ರಿಯೆಯನ್ನು ಈ ಕೆಳಕಂಡಂತೆ ಮೂಲಭೂತವಾಗಿ ಬದಲಾಯಿಸುತ್ತದೆ:

- ನಿಯಂತ್ರಕ ಮೇಲ್ವಿಚಾರಣೆಗಳ ಕಠಿಣತೆ ಮತ್ತು ಅವುಗಳ ಸಂಖ್ಯೆಯನ್ನು ಬಹಳವಾಗಿ ಕಡಿಮೆ ಮಾಡುತ್ತದೆ.
- ವಿವಿಧ ಕೈಗಾರಿಕೆಗಳನ್ನು ಮರುವರ್ಗೀಕರಿಸುವುದರಿಂದ ಅವು ಪರಿಸರ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ.

- ಸಾರ್ವಜನಿಕ ಆಲಿಕೆಯ ವ್ಯಾಪ್ತಿ ಮತ್ತು ಅವಧಿಯನ್ನು ಕಡಿಮೆಗೊಳಿಸುವುದರಿಂದ ಅದರೊಂದಿಗೆ ರಾಜಿ ಮಾಡಿಕೊಳ್ಳುವಂತಾಗುತ್ತದೆ.

- ಪರಿಸರ ಉಲ್ಲಂಘನೆಗಳನ್ನು ಸಾಮಾನ್ಯಗೊಳಿಸಿದಂತಾಗುತ್ತದೆ.

ಪರಿಸರ ಸಂರಕ್ಷಣಾ ಕಾಯ್ದೆ 1986 ರ ಸೆಕ್ಷನ್ 3, ಉಪವಿಭಾಗ (1) ರ ಅಡಿಯಲ್ಲಿ, "ಪರಿಸರದ ಗುಣಮಟ್ಟವನ್ನು ರಕ್ಷಿಸುವ, ಸುಧಾರಿಸುವ ಉದ್ದೇಶದಿಂದ ಹಾಗು ಪರಿಸರ ಮಾಲಿನ್ಯವನ್ನು ತಡೆಗಟ್ಟುವ, ತಗ್ಗಿಸುವ ಮತ್ತು ನಿಯಂತ್ರಿಸುವ ಉದ್ದೇಶದಿಂದ" ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿರುತ್ತದೆ. ಆದರೆ EIA 2020 ಕರಡು ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರಕ್ಕೆ ಸಂಪೂರ್ಣವಾದ ವ್ಯತಿರಿಕ್ತವಾದ ಅಧಿಕಾರವನ್ನು ನೀಡಿದಂತಾಗುತ್ತದೆ.

ಹಿಂದಿನ ಪರಿಸರ ಪರಿಣಾಮದ ಮೌಲ್ಯಮಾಪನದಲ್ಲಿನ (EIA) ಸಮಸ್ಯೆಗಳನ್ನು ಬಗೆಹರಿಸುವಲ್ಲಿ EIA 2020 ಕರಡು ಅಧಿಸೂಚನೆಯು ಶೋಚನೀಯವಾಗಿ ಸೋತಿದೆ ಎಂದು ಹೇಳಬಹುದು. ಉದಾಹರಣೆಗೆ, ಸಾರ್ವಜನಿಕ ವಿಚಾರಣೆಗಳನ್ನು ನಡೆಸುವ ಕಳಪೆ ವಿಧಾನ, ಸಂಚಿತ ಪರಿಸರ ಪರಿಣಾಮದ ಮೌಲ್ಯಮಾಪನಗಳ ಕೊರತೆ, EIA ವರದಿಯನ್ನು ಅಂತಿಮಗೊಳಿಸುವಿಕೆಯಲ್ಲಿ ಪಾರದರ್ಶಕತೆಯ ಕೊರತೆ, ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲತೆ, ತಪ್ಪಿತಸ್ಥರ ಮೇಲ್ವಿಚಾರಣೆ ಮಾಡುವುದರಲ್ಲಿ ಮತ್ತು ನಿಯಮ ಉಲ್ಲಂಘಿಸಿರುವವರನ್ನು ಹೊಣೆಗಾರರನ್ನಾಗಿ ಮಾಡುವುದರಲ್ಲಿ ಹಾಗೂ ಇತ್ಯಾದಿಗಳಲ್ಲಿ ಸೋತಿದೆ. ಪ್ರಸ್ತುತ EIA ಕರಡು ಅಧಿಸೂಚನೆ-2020, ಅಂತಹ ಕಳವಳಗಳನ್ನು ಉಲ್ಬಣಗೊಳಿಸುತ್ತದೆ ಮತ್ತು ಭಾರತದಲ್ಲಿ ಪರಿಸರ ನಾಶದ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುತ್ತದೆ. 2016 ಇಂದೀಚೆಗೆ ಕೇವಲ 2 ವರ್ಷದಲ್ಲಿ 36 ಸ್ಥಾನಗಳನ್ನು ಕಳೆದುಕೊಂಡು, 2018ರ ವಿಶ್ವ ಪರಿಸರ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ ಭಾರತವು 180 ರಾಷ್ಟ್ರಗಳ ಪೈಕಿ 177 ಸ್ಥಾನದಲ್ಲಿದೆ.

ಆದ್ದರಿಂದ ನಾವು **EIA 2020** ಕರಡು ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕೆಂದು **MoEFCC** ಗೆ ವಿನಂತಿಸುತ್ತೇವೆ ಮತ್ತು **EIA 2006** ಅನ್ನು ಇನ್ನಷ್ಟು ಬಲಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ**.**

EIA 2020 ಕರಡು ಅಧಿಸೂಚನೆಯೊಂದಿಗಿನ ನಮ್ಮ ಪ್ರಮುಖ ಕಾಳಜಿಗಳು:

1. ಅವಾಸ್ತವಿಕ ಪರಿಸರ ಅನುಮತಿಗಳನ್ನು ಕಾನೂನುಬದ್ಧಗೊಳಿಸುವುದು

EIA 2020 ಕರಡು ಅಧಿಸೂಚನೆಯು ಪರಿಸರ ಆಡಳಿತದ ಮೂಲ ಮುನ್ನೆಚ್ಚರಿಕೆ ತತ್ವಕ್ಕೆ ವಿರುದ್ಧವಾಗಿದೆ. ಇದು ಪೋಸ್ಟ್-ಫ್ಯಾಕ್ಟೊ ಪರಿಸರ ಅನುಮತಿಗಳನ್ನು ನ್ಯಾಯಸಮ್ಮತಗೊಳಿಸುತ್ತದೆ, ಇದರರ್ಥ ಪರಿಸರ ಅನುಮತಿ ಇಲ್ಲದ ಸಂದರ್ಭಗಳಲ್ಲಿಯೂ ಸಹ, ಯೋಜನೆಯನ್ನು ಮುಂದುವರಿಸಬಹುದು. ಹೀಗಾಗಿ, ಅಧಿಸೂಚನೆಯು ಸಂಭವಿಸಬಹುದಾದ ಉಲ್ಲಂಘನೆಗಳನ್ನು ಕ್ರಮಬದ್ಧಗೊಳಿಸುತ್ತದೆ, ಇದರ ಬದಲಿಗೆ ಉಲ್ಲಂಘನೆ ಮಾಡುವ ಯೋಜನೆಯ ಪ್ರತಿಪಾದಕನ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಮತ್ತು ನಿಯಮ ಉಲ್ಲಂಘಿಸುವ ಯೋಜನೆಗಳನ್ನು ಸ್ಥಗಿತಗೊಳಿಸಬೇಕಿರುತ್ತದೆ.

ಪೋಸ್ಟ್-ಫ್ಯಾಕ್ಟೊ ಪರಿಸರ ಅನುಮತಿಗಳ ಭೀಕರ ಪರಿಣಾಮಗಳ ಇತ್ತೀಚಿನ ಉದಾಹರಣೆಯೆಂದರೆ, 2020 ರ ಮೇ 7 ರಂದು ವಿಶಾಖಪಟ್ಟಣಂನ ಎಲ್. ಜಿ. ಪಾಲಿಮರ್ಸ್ ಕಾರ್ಖಾನೆಯಲ್ಲಿ ಅನಿಲ ಸೋರಿಕೆಯಾಗಿದ್ದು, ಇದು 12 ಜನರನ್ನು ಬಲಿ ತೆಗೆದುಕೊಂಡಿತು, ನೂರಾರು ಜನರನ್ನು ಅಸ್ವಸ್ಥಗೊಳಿಸಿತು ಮತ್ತು ಹಲವಾರು ಜನ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಈ ಘಟಕವು ಪರಿಸರ ಅನುಮತಿ (Environmental Clearance-EC) ಇಲ್ಲದೆ ಕಾರ್ಯನಿರ್ವಹಿಸುತ್ತಿತ್ತು, ಮತ್ತು ಪರಿಸರ ಅನುಮತಿಯನ್ನು ಗಾಳಿಗೆ ತೂರಿದ ಪರಿಣಾಮವೇ ಅಂದು ನಡೆದ ಅವಘಡಕ್ಕೆ ಮೂಲ ಕಾರಣ ಎಂದು ಹೇಳಬಹುದು.

ಈಗ ಪರಿಸರ ಅನುಮತಿಗಳಿಲ್ಲದೆ ಇಂತಹ ಅನೇಕ ಯೋಜನೆಗಳು ಚಾಲನೆಯಲ್ಲಿದ್ದು ಪರಿಸರ ಮತ್ತು ಮಾನವ ಆರೋಗ್ಯಕ್ಕೆ ಅಪಾಯಕಾರಿಯಾಗಿವೆ. ವಿಶಾಖಪಟ್ಟಣಂನಲ್ಲಿ ನಡೆದ ರೀತಿಯ ದುರಂತವನ್ನು ಮರುಕಳಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆತಂಕಕಾರಿ ಸಂಗತಿಯೆಂದರೆ, ನಿರ್ಮಾಣ ಮತ್ತು ಅನುಸ್ಥಾಪನಾ ಹಂತದಲ್ಲಿರುವ ಗಣಿಗಾರಿಕೆ ಯೋಜನೆಗಳಿಗೆ ಹೊಸ ಅಧಿಸೂಚನೆಯ ಪ್ರಕಾರ ಮುಂದಿನ 50 ವರ್ಷಗಳವರೆಗೆ ಪರಿಸರ ಅನುಮತಿ ಮಾನ್ಯವಾಗುತ್ತದೆ, EIA 2006 ರ ಅಧಿಸೂಚನೆಯಲ್ಲಿ ಉಲ್ಲೇಖಿಸಲಾದ ಅವಧಿಗಿಂತ 20 ವರ್ಷಗಳ ಕಾಲಾವಧಿ ಹೆಚ್ಚಿಸಿದಂತಾಗುತ್ತದೆ.

ಮೂಲಸೌಕರ್ಯ ವಿಸ್ತರಣೆಗಾಗಿ ಇಂತಹ ಪೋಸ್ಟ್-ಫ್ಯಾಕ್ಟೊ ಪರಿಸರ ಅನುಮತಿಯನ್ನು ಹೆಚ್ಚಿನ ಜೀವವೈವಿಧ್ಯತೆಯನ್ನು ಹೊಂದಿರುವ ಮತ್ತು ಹೆಚ್ಚಿನ ವನ್ಯಜೀವಿಗಳ ಸಂಖ್ಯೆಯನ್ನು ಹೊಂದಿರುವ ಪ್ರದೇಶಗಳಲ್ಲಿ ನೀಡಿದ್ದೇ ಆದಲ್ಲಿ, ಪರಿಸರಕ್ಕೆ ಮಾರಕವಾಗಿರುತ್ತದೆ. ಒಮ್ಮೆ ಅಪರೂಪದ ಜೀವವೈವಿಧ್ಯವನ್ನು ಕಳೆದುಕೊಂಡರೆ ಮತ್ತೆ ಮರುಸೃಷ್ಟಿಸಲು ಅಸಾಧ್ಯ, ಒಂದು ಕಡೆ ನಾಶವಾದದನ್ನು ಬೇರೊಂದು ಕಡೆ ಮರುಸೃಷ್ಟಿ ಮಾಡಬಹುದೆನ್ನುವುದು ದೋಷಪೂರಿತ ಪರಿಕಲ್ಪನೆಯಾಗಿದೆ. ಪರಿಸರವನ್ನು ನಶಿಸಿ, ಹಣ ಪರಿಹಾರವನ್ನು ಒದಗಿಸಬಹುದೆಂಬುದು ಒಂದು ದೋಷಪೂರಿತವಾದ ವಿಚಾರವಾಗಿದೆ, ಏಕೆಂದರೆ ಒಮ್ಮೆ ನೀರು, ಮಣ್ಣು, ಗಾಳಿಯ ಗುಣಮಟ್ಟ ಹಾನಿಯಾಗಿ, ಪರಿಸರ ವ್ಯವಸ್ಥೆಗಳು ಮತ್ತು ವನ್ಯಜೀವಿಗಳ ಅಂತ್ಯವಾಗಿ, ಮಾನವನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವಾದರೆ ಮತ್ತೆ ಸರಿಪಡಿಸುವುದು ಅಸಾಧ್ಯ.

ಪರಿಸರ ನ್ಯಾಯಶಾಸ್ತ್ರದ ಮೂಲಭೂತ ತತ್ವಗಳು ಪೋಸ್ಟ್-ಫ್ಯಾಕ್ಟೊ ಅನುಮತಿಗಳ ಪರಿಕಲ್ಪನೆಯನ್ನು ಪರಿಗಣಿಸುವುದಿಲ್ಲ. ಸರ್ವೋಚ್ಚ ನ್ಯಾಯಾಲಯ, ವಿವಿಧ ಉಚ್ಚ ನ್ಯಾಯಾಲಯಗಳು ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಹಿಂದಿನ ನ್ಯಾಯಾಲಯದ ತೀರ್ಪುಗಳಿಂದ ಪೂರ್ವನಿದರ್ಶನಗಳಿಂದ ಹೇಳುವುದೇನೆಂದರೆ, ಅಲ್ಲಿ ಪೋಸ್ಟ್-ಫ್ಯಾಕ್ಟೊ ತೆರವು ಪ್ರಕರಣಗಳನ್ನು ಕಾನೂನುಬಾಹಿರವೆಂದು ಪರಿಗಣಿಸಲಾಗಿದೆ ಮತ್ತು ಖಂಡಿಸಲಾಗಿದೆ. ಇತ್ತೀಚೆಗೆ 01.04.2020 ರಂದು Alembic Pharmaceuticals Ltd. ವಿರುದ್ಧ ರೋಹಿತ್ ಪ್ರಜಾಪತಿ ಅವರು ಸಲ್ಲಿಸಿದ ಸಿವಿಲ್ ಮೇಲ್ಮನವಿ ಸಂಖ್ಯೆ 1526/2016 ಯಂತೆ ಸರ್ವೋಚ್ಚ ನ್ಯಾಯಾಲಯವು ಪೋಸ್ಟ್-ಫ್ಯಾಕ್ಟೊ ಪರಿಸರ ಅನುಮತಿಗಳು ಪರಿಸರ ನ್ಯಾಯಶಾಸ್ತ್ರಕ್ಕೆ ವಿರುದ್ಧವಾಗಿವೆ ಎಂದು ತೀರ್ಪು ನೀಡಿರುತ್ತದೆ. 2013 ರಲ್ಲಿ, *Association for Environmental Protection v State of Kerala*, ಸರ್ವೋಚ್ಚ ನ್ಯಾಯಾಲಯದ ಹೇಳಿಕೆಯಂತೆ, ಪೂರ್ವ ಪರಿಸರ ಅನುಮತಿ ಪಡೆಯದೆ ಯೋಜನೆಗಳನ್ನು ಪ್ರಾರಂಭಿಸುವುದು ಸಂವಿಧಾನದ 21 ನೇ ಪರಿಚ್ಛೇದದ ಪ್ರಕಾರ ಅಲ್ಲಿಯ ಜನರ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತೆ ಎಂದು ಹೇಳುತ್ತದೆ.

ಈ ಕರಡು ಅಧಿಸೂಚನೆಯು ಮುನ್ನೆಚ್ಚರಿಕೆ ತತ್ವ ಮತ್ತು ನ್ಯಾಯಸಮ್ಮತವಾದ ಸುಸ್ಥಿರ ಅಭಿವೃದ್ಧಿಗೂ ವಿರುದ್ಧವಾಗಿರುತ್ತದೆ.

**2.** ಪ್ರಮುಖ ಕೈಗಾರಿಕೆಗಳನ್ನು **EIA** ಪ್ರಕ್ರಿಯೆಯಿಂದ ಹೊರಗಿಟ್ಟಿರುವುದು**.**

ಈ EIAಯ ಅಧಿಸೂಚನೆಯು ಅದರ ವ್ಯಾಪ್ತಿಯನ್ನು ಕುಗ್ಗಿಸಿದೆ ಹಾಗು ಪರಿಸರವನ್ನು ಕಾಪಾಡುವ ತನ್ನ ಧ್ಯೆಯಕ್ಕೆ ವಿರುದ್ಧವಾಗಿದೆ. 2020ರ EIA ಅಡಿಯಲ್ಲಿ ಸಂಪೂರ್ಣ ಪರಿಶೀಲನೆಗೆ ಒಳಪಡಬೇಕಾದ ನಲವತ್ತು ಬಗೆಯ ಕೈಗಾರಿಕೆಗಳನ್ನು ಮರುವರ್ಗೀಕರಣ ಮಾಡಿದ್ದು, ಬಹಳ ಆತಂಕಕಾರಿ ವಿಷಯವಾಗಿದೆ. ಒಟ್ಟಾರೆಯಾಗಿ, EIA 2020 ಕರಡು ಅಧಿಸೂಚನೆಯು ಮರಳು ಮತ್ತು ಜೇಡಿಮಣ್ಣಿನ ಹೊರತೆಗೆಯುವಿಕೆ, ಸೌರ ವಿದ್ಯುತ್ ತಯಾರಿಕೆ, ಕಲ್ಲಿದ್ದಲು ಮತ್ತು ಕಲ್ಲಿದ್ದಲು ರಹಿತ ಖನಿಜಗಳ ಗಣಿಗಾರಿಕೆ ಮುಂತಾದವುಗಳಿಗೆ ಯಾವುದೇ ಪೂರ್ವ ಪರಿಸರ ಅನುಮತಿ ಬೇಕಿಲ್ಲ ಎನ್ನುವುದು ಆತಂಕಕ್ಕೆ ದೂಡುವ ವಿಷಯವಾಗಿದೆ.

EIA 2020 ರ ಕರಡು ಅಧಿಸೂಚನೆಯಲ್ಲಿ, ನದಿಗಳಿಗೆ ಪರಿಸರ ಅನುಮತಿಯ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ವ್ಯಾಖ್ಯಾನವನ್ನು ನೀಡಿದ್ದು ಇದು ಪರಿಸರ ಅನುಮತಿ ಪ್ರಕ್ರಿಯೆಯಿಂದ ಹೊರಗಿಡುತ್ತದೆ. ಇದರಂತೆ ನದಿ ಯೋಜನೆಗಳನ್ನು ಬಿ-2 ಯೋಜನೆಗಳಾಗಿ ಮರು ವರ್ಗೀಕರಿಸಿದ್ದಲ್ಲಿ, ಭಾರತದಾದ್ಯಂತ 100 ಕ್ಕೂ ಹೆಚ್ಚು ನದಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ, ಅಂತಹ ಯೋಜನೆಗಳು ಪರಿಸರ ಪರಿಶೀಲನೆಯಿಂದ ತಪ್ಪಿಸಿಕೊಳ್ಳುತ್ತವೆ. ಈ ಕ್ರಮವು ನೇರವಾಗಿ ನದಿ ಪರಿಸರದಲ್ಲಿ ಕಂಡುಬರುವ ಜಲಚರಗಳಿಗೆ, ಭಾರತದ ರಾಷ್ಟ್ರೀಯ ಜಲಚರ ಪ್ರಾಣಿ-ಗಂಗಾನದಿ ಡಾಲ್ಫಿನ್ ಮತ್ತು ಜೀವನೋಪಾಯಕ್ಕೆ ನದಿಗಳನ್ನು ಅವಲಂಬಿಸಿರುವ ಜನರಿಗೆ ಕಂಟಕವಾಗಲಿದೆ.

ಈ ಕರಡು ಅಧಿಸೂಚನೆಯ ಮತ್ತೊಂದು ಫಲಾನುಭವಿಯು ನಿರ್ಮಾಣ ಉದ್ಯಮವಾಗಿದೆ, ಏಕೆಂದರೆ ಹೊಸ ಕರಡು ಅಧಿಸೂಚನೆಯ ಪ್ರಕಾರ ದೊಡ್ಡ ಕೈಗಾರಿಕೆಗಳನ್ನು ಮಾತ್ರ ಸಂಪೂರ್ಣವಾಗಿ ಮೌಲ್ಯಮಾಪನಕ್ಕೆ ಒಳಪಡುತ್ತವೆ ಮತ್ತು ಸಣ್ಣ ಉಧ್ಯಮಗಳು ಮೌಲ್ಯಮಾಪನದಿಂದ ತಪ್ಪಿಸಿಕೊಳ್ಳುತ್ತವೆ. ಅಧಿಸೂಚನೆಯಲ್ಲಿ ಅತಿದೊಡ್ಡ ಕಟ್ಟಡ ಮತ್ತು ದೊಡ್ಡ ನಿರ್ಮಾಣ ಯೋಜನೆಗಳನ್ನು ಮಾತ್ರ ಮೌಲ್ಯಮಾಪನ ಸಮಿತಿಗೆ ಒಳಪಟ್ಟಿರುತ್ತವೆ. ಇತರೆ ವಿವಿಧ ನಿರ್ಮಾಣ ಯೋಜನೆಗಳನ್ನು ಬಿ-2 ಯೋಜನೆಗಳಾಗಿ ಮರುವರ್ಗೀಕರಿಸಲ್ಪಟ್ಟಿದ್ದರಿಂದ ಮೌಲ್ಯಮಾಪನದಿಂದ ತಪ್ಪಿಸಿಕೊಳ್ಳುತ್ತವೆ.

ನಿರ್ಮಾಣ ಉದ್ಯಮವು ಹೆಚ್ಚು ಮಾಲಿನ್ಯಕಾರಕ ಕೈಗಾರಿಕೆಗಳಲ್ಲಿ ಒಂದಾಗಿರುತ್ತದೆ ಮತ್ತು ನಗರ ಪ್ರದೇಶಗಳಲ್ಲಿ ಇದು ವಾಯುಮಾಲಿನ್ಯದ ಮಟ್ಟವನ್ನು ಹೆಚ್ಚಾಗಿಸಲು ಪ್ರಮುಖ ಕಾರಣವಾಗಿದೆ. ದೆಹಲಿಯಲ್ಲಿ (ವಿಶ್ವದ ಅತ್ಯಂತ ಕಲುಷಿತ ನಗರಗಳಲ್ಲಿ ಒಂದಾಗಿದೆ), ಒಟ್ಟು ವಾಯುಮಾಲಿನ್ಯದ ಶೇಕಡಾ 28-30 ರಷ್ಟು ನಿರ್ಮಾಣ ಸ್ಥಳಗಳಿಂದ ಹೊರಹೊಮ್ಮುವ ಧೂಳಿನಿಂದ ಉಂಟಾಗಿರುತ್ತದೆ. ಭಾರತದ ಪ್ರಮುಖ ನಗರಗಳಲ್ಲಿ ಕಂಡುಬರುವ ವಾಯುಮಾಲಿನ್ಯವು ಪ್ರಮುಖವಾಗಿ ಈ ನಿರ್ಮಾಣಗಳಿಂದ ಬರುವಂತಾದಾಗಿದ್ದು ಸಾರ್ವಜನಿಕರ ಆರೋಗ್ಯದ ಮೇಲೆ ಭೀಕರ ಪರಿಣಾಮಗಳನ್ನು ಉಂಟುಮಾಡುತ್ತದೆ. ಇದರಿಂದ ಉಂಟಾಗುವ ಉಸಿರಾಟದ ಕಾಯಿಲೆಗಳು ಕೋವಿಡ್19 ಸೋಂಕಿತರ ಮರಣ ಪ್ರಮಾಣವನ್ನು ಹೆಚ್ಚಿಸುವಲ್ಲಿ ಒಂದು ಪ್ರಮುಖ ಕಾರಣ.

ಅಂತಹ ಬಿಕ್ಕಟ್ಟಿನ ಸಮಯದಲ್ಲಿ, ಭಾರತವು ಪರಿಸರ ಕಾನೂನುಗಳನ್ನು ಬಲಪಡಿಸಬೇಕು ಮತ್ತು ಮಾಲಿನ್ಯಕ್ಕೆ ಕಾರಣವಾಗುವ ಕೈಗಾರಿಕೆಗಳ ವಿರುದ್ಧ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು.

**3.** ಸಾರ್ವಜನಿಕ ವಿಚಾರಣೆಯ ಪ್ರಕ್ರಿಯೆಯನ್ನು ತಗ್ಗಿಸುವುದು

EIA 2006 ರ ಅಧಿಸೂಚನೆಯ ಒಂದು ಪ್ರಮುಖ ಲಕ್ಷಣವೆಂದರೆ, ನಾಗರಿಕರಿಗೆ, ವಿಶೇಷವಾಗಿ ಅದರಿಂದ ನೇರವಾಗಿ ಪರಿಣಾಮವಾಗುವವರಿಗೆ, ಸಾರ್ವಜನಿಕ ಸಮಾಲೋಚನೆಗಳ ಮೂಲಕ ಹೊಸ ಯೋಜನೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಧಿಕಾರವಿರುತ್ತದೆ. ಇದು ಪ್ರಜಾಪ್ರಭುತ್ವದ ಒಂದು ಪ್ರಮುಖ ಲಕ್ಷಣ ಮತ್ತು ಮಾಲಿನ್ಯಕಾರಕ ಕೈಗಾರಿಕೆಗಳನ್ನು ಹೊಣೆಗಾರರನ್ನಾಗಿಸುತ್ತದೆ.

EIA 2020 ಕರಡು ಅಧಿಸೂಚನೆಯು ಬಿ-2 ಯೋಜನೆಗಳು ಸೇರಿದಂತೆ, ವಿವಿಧ ರೀತಿಯ ನಿರ್ಮಾಣದ ಯೋಜನೆಗಳನ್ನು ಪ್ರಾರಂಭಿಸುವ ಮೊದಲು ಸಾರ್ವಜನಿಕ ವಿಚಾರಣೆಗೆ ಒಳಪಡದಂತೆ ವಿನಾಯಿತಿ ನೀಡುವ ಮೂಲಕ ಈ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತದೆ. ಹೆಚ್ಚುವರಿಯಾಗಿ, ಶೇಕಡಾ 50% ರಷ್ಟು ಯೋಜನೆಗಳಿಗೆ ಸಾರ್ವಜನಿಕ ವಿಚಾರಣೆಯಿಂದ ವಿನಾಯಿತಿ ನೀಡಲಾಗಿದೆ.

ರಾಷ್ಟ್ರೀಯ ರಕ್ಷಣಾ ಅಥವಾ ಭದ್ರತೆಗೆ ಸಂಬಂಧಿಸಿದ ಯೋಜನೆಗಳನ್ನು ಸಾರ್ವಜನಿಕ ವಿಚಾರಣೆಯಿಂದ ಮುಕ್ತಗೊಳಿಸಲಾಗಿದೆ. ಇಲ್ಲಿ ಆತಂಕಕಾರಿ ಸಂಗತಿಯೆಂದರೆ, EIA 2020 ರ ಕರಡು ಅಧಿಸೂಚನೆಯು 'ಕಾರ್ಯತಂತ್ರದ ಯೋಜನೆ'ಯನ್ನು ವ್ಯಾಖ್ಯಾನಿಸುವಲ್ಲಿ ವಿಫಲವಾಗಿದೆ, ಹೀಗಾಗಿ ಯಾವ ಯೋಜನೆಗಳು 'ಕಾರ್ಯತಂತ್ರದ' ಪರಿಗಣನೆಗೆ ಒಳಪಡುತ್ತವೆ ಎಂಬುದನ್ನು ನಿರ್ಧರಿಸಲು ಸರ್ಕಾರಕ್ಕೆ ಕಡಿವಾಣವಿಲ್ಲದ ಶಕ್ತಿಯನ್ನು ನೀಡುತ್ತದೆ ಮತ್ತು ಆ ಮೂಲಕ

ಪರಿಸರ ಪ್ರಭಾವದ ಮೌಲ್ಯಮಾಪನದ ವ್ಯಾಪ್ತಿಯಿಂದ ಹೊರಗಿಡುತ್ತದೆ. ಅಂತಹ ಕಾರ್ಯತಂತ್ರದ ಯೋಜನೆಗಳನ್ನು ಸಾರ್ವಜನಿಕರಿಗೆ ತಿಳಿಸಲಾಗುವುದಿಲ್ಲ, ಇದರಿಂದಾಗಿ ಪಾರದರ್ಶಕತೆಗೆ ಅವಕಾಶವೇ ಇಲ್ಲದಂತಾಗುತ್ತದೆ.

ಸಾರ್ವಜನಿಕ ವಿಚಾರಣೆಗಳಿಂದ ಯೋಜನೆಗಳಿಗೆ ವಿನಾಯಿತಿ ನೀಡಿದರೆ ನಾಗರಿಕರಿಗೆ ಮುಖ್ಯವಾಗಿ ದುರ್ಬಲ ಸಮುದಾಯಗಳ ಜನರಿಗೆ ತಮ್ಮ ಮೇಲೆ ಮತ್ತು ತಮ್ಮ ಆರೋಗ್ಯ, ಜೀವನೋಪಾಯದ ಮೇಲೆ ನೇರವಾಗಿ ಪರಿಣಾಮ ಬೀರುವ ಯೋಜನೆಯ ವಿರುದ್ಧ ಧ್ವನಿ ಎತ್ತುವ ಹಕ್ಕನ್ನು ಕಡಿತಗೊಳಿಸಿದಂತಾಗುತ್ತದೆ. ಇದಕ್ಕೆ ಇತ್ತೀಚಿನ ಉದಾಹರಣೆ ಅಸ್ಸಾಂನ ಬಾಗ್ಜನ್ ನಲ್ಲಿ ಕಂಡುಬಂದಿದೆ, ಅಲ್ಲಿ ಆಯಿಲ್ ಇಂಡಿಯಾ ಲಿಮಿಟೆಡ್ (OIL) ನಿರ್ವಹಿಸುತ್ತಿರುವ ಗ್ಯಾಸ್- ರಿಗ್ಗೆ ಬೆಂಕಿ ತಗುಲುವ ಮೊದಲು 12 ದಿನಗಳವರೆಗೆ ಅನಿಯಂತ್ರಿತವಾಗಿ ಸೋರಿಕೆಯಾಗುತಿತ್ತು. ನಿರಂತರ ಸೋರಿಕೆಯಿಂದ ಮೀಥೇನ್, ಪ್ರೋಪೇನ್ ಹಾಗು ಪ್ರೊಪಿಲೀನ್ನಂತಹ ವಿಷಕಾರಿ ಅನಿಲಗಳು ತೈಲದೊಂದಿಗೆ ಬೆರೆತು ಘನೀಕರಣಗೊಂಡು ಅಲ್ಲಿನ ಜನರ ಕೃಷಿ ಭೂಮಿಯ ಮೇಲೆ ತೀವ್ರವಾದ ಪ್ರಭಾವವನ್ನು ಬೀರಿದೆ ಹಾಗು ಅವರು ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆಯುವಂತೆ ಮಾಡಿದೆ.  ಹತ್ತಿರದ ಗದ್ದೆ ಹಾಗು ಕಾಡಿಗೆ, ತೈಲ ಸೋರಿಕೆಯಾಗಿರುವುದರಿಂದ ಅವುಗಳಿಗೆ ಬದಲಿಸಲಾಗದ ಹಾನಿ ಉಂಟಾಗಿದೆ. ಮೀನುಗಾರಿಕೆ ಮತ್ತು ಕೃಷಿಗಾಗಿ ಮಾಗುರಿ ಗದ್ದೆಗಳನ್ನು ಅವಲಂಬಿಸಿರುವ ಸ್ಥಳೀಯ ಸಮುದಾಯಗಳಿಗೆ ಅಪಾರ ತೊಂದರೆ ಉಂಟಾಗಿದೆ. ಮಾಗುರಿ-ಮೊಟಾಪುಂಗ್ ಗದ್ದೆಗಳು ಜಾಗತಿಕವಾಗಿ ಗುರುತಿಸಲ್ಪಟ್ಟ ಪ್ರಮುಖ ಪಕ್ಷಿಧಾಮವಾಗಿವೆ. ಈ ಗದ್ದೆಗಳು ಡಿಬ್ರು-ಸೈಖೋವಾ ಬಯೋಸ್ಫಿಯರ್ ರಿಸರ್ವ್‌ನ ಒಂದು ಪ್ರಮುಖ ಭಾಗವಾಗಿದ್ದು, ಇದು ಹಲವಾರು ಸ್ಥಳೀಯ ಮತ್ತು ಅಳಿವಿನಂಚಿನಲ್ಲಿರುವ ಜೀವಪ್ರಭೇದಗಳನ್ನು ಒಳಗೊಂಡಿದೆ.

ಈ OIL ಕಂಪನಿಯು ತನ್ನ ಜಾಲವನ್ನು ವಿಸ್ತರಿಸುವ ಮೊದಲು ಸಾರ್ವಜನಿಕ ವಿಚಾರಣೆಗಳನ್ನು ನಡೆಸುವುದರಿಂದ ತಪ್ಪಿಸಿಕೊಂಡಿದೆ ಮತ್ತು ಇದನ್ನು ಲೆಕ್ಕಿಸದೆ ಪರಿಸರ ಅನುಮತಿ ನೀಡಲಾಗಿತ್ತು.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸಹ ಸಾರ್ವಜನಿಕ ವಿಚಾರಣೆಯ ಮಹತ್ವವನ್ನು ಪದೇ ಪದೇ ಎತ್ತಿಹಿಡಿಯುತ್ತದೆ. ಒಂದು ಪ್ರಮುಖ ಉದಾಹರಣೆಯೆಂದರೆ *Lafarge Umiam Mining Private Limited v. Union of India*, ಅಲ್ಲಿ ಸಾರ್ವಜನಿಕ ಸಮಾಲೋಚನೆಯು ಪರಿಸರ ಅನುಮತಿ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಮಾಡಬೇಕಿರುತ್ತದೆ ಎಂದು ತಿಳಿಸುತ್ತದೆ. ಯಾವುದೇ ಯೋಜನೆಯಿಂದ ಅಥವಾ ಯಾವುದೇ ಕಾರಣಗಳಿಂದ ಒಂದು ವ್ಯಕ್ತಿ ಅದರಿಂದ ಬಳಲುತ್ತಿದ್ದರೆ ಆತ ದೂರನ್ನು ನೋಂದಾಯಿಸಿ, ಆತನ ಕುಂದುಕೊರತೆಗಳಿಗೆ ಪರಿಹಾರವನ್ನು ಪಡೆಯಲು ಸಾರ್ವಜನಿಕ ವಿಚಾರಣೆಯು ಪರಿಣಾಮಕಾರಿ ವೇದಿಕೆಯನ್ನು ಒದಗಿಸುತ್ತದೆ.

ಒಟ್ಟಾರೆ, ಅಭಿವೃದ್ಧಿಗೆ ಸಾರ್ವಜನಿಕ ಸಮಾಲೋಚನೆಗಳು ಅವಶ್ಯಕ, ಅವುಗಳನ್ನು ತೆಗೆದುಹಾಕುವುದು ಸ್ಥಳೀಯ ಸಮುದಾಯಗಳಿಂದ ಅವರ ಪ್ರಜಾಪ್ರಭುತ್ವದ ಹಕ್ಕನ್ನು ಕಿತ್ತುಕೊಂಡಂತಾಗುತ್ತದೆ ಮತ್ತು ಯೋಜನೆಗಳಿಂದ ಅವರಿಗಾಗುವ ಪರಿಣಾಮಗಳ ವಿರುದ್ಧ ಧ್ವನಿ ಎತ್ತಲು ಅವರಿಗಿರುವ ಏಕೈಕ ಅವಕಾಶ ಈ ಸಾರ್ವಜನಿಕ ಸಮಾಲೋಚನೆಗಳು, ಅವರು ಅದನ್ನು ಕಳೆದುಕೊಳ್ಳುವಂತಾಗಬಾರದು.

**4.** ನಾಗರಿಕರು ಉಲ್ಲಂಘನೆಗಳ ಧ್ವನಿ ಎತ್ತಲು ಸಾಧ್ಯವಿರುವುದಿಲ್ಲ

EIA 2020 ರ ಕರಡು ಅಧಿಸೂಚನೆಯ ಋಣಾತ್ಮಕ ಅಂಶವೆಂದರೆ, EIA ಅಡಿಯಲ್ಲಿನ ಯೋಜನೆಯಲ್ಲಿ ಪರಿಸರದ ನಿಯಮ ಉಲ್ಲಂಘನೆಯಾಗಿದ್ದಲ್ಲಿ ಅಧಿಕೃತವಾಗಿ ವರದಿ ಮಾಡುವ ಅಧಿಕಾರವು ಯೋಜನಾ ಅಭಿವರ್ಧಕರಿಗೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಮಾತ್ರ ಇರುತ್ತದೆ. ನೇರವಾಗಿ ಪೀಡಿತ ಸಮುದಾಯಗಳಿಗೆ ಉಲ್ಲಂಘನೆಯನ್ನು ವರದಿ ಮಾಡಲು ಯಾವುದೇ ಅವಕಾಶವಿರುವುದಿಲ್ಲ. ಇದು ನಾಗರಿಕರ, ವಿಶೇಷವಾಗಿ ಸ್ಥಳೀಯ ಸಮುದಾಯಗಳು ಮತ್ತು ಇತರ ಮಧ್ಯಸ್ಥಗಾರರ ಹಕ್ಕುಗಳನ್ನು ಕಡಿತಗೊಳಿಸಿ, ಉಲ್ಲಂಘನೆಗಳ ವಿರುದ್ಧ ಧ್ವನಿ ಎತ್ತುವ ಹಕ್ಕನ್ನು ಕಿತ್ತುಕೊಂಡಂತಾಗುತ್ತದೆ.

5. ಹುಲಿ ಸೇರಿದಂತೆ ವನ್ಯ ಜೀವಿಗಳು ಮತ್ತು ಅವುಗಳ ಆವಾಸಸ್ಥಾನಗಳ ಮೇಲೆ ಪರಿಣಾಮ

EIA ವ್ಯಾಪ್ತಿಗೆ ಬರುವ ಯೋಜನೆಗಳಿಂದಾಗಿ ವನ್ಯಜೀವಿ ಮತ್ತು ಅವುಗಳ ಆವಾಸಸ್ಥಾನಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿವೆ. EIA ಪ್ರಕ್ರಿಯೆಯು ಇದರ ಬಗ್ಗೆ ಕಾಳಜಿ ವಹಿಸಲು ವಿಫಲವಾಗಿರುವುದು ಶೋಚನೀಯವಾಗಿದೆ, ಈ ವೈಫಲ್ಯವು ಕರಡು ಅಧಿಸೂಚನೆಯಲ್ಲಿ ಮುಂದುವರೆಯುತ್ತದೆ. ಅತಿ ವೇಗದ ಅಳಿವು ಮತ್ತು ಪರಿಸರ ನಶಿಸುತ್ತಿರುವ ಅಭೂತಪೂರ್ವ ಸಮಯದಲ್ಲಿ ವನ್ಯಜೀವಿಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕಂತಹದು ಇದರ ವ್ಯಫಲ್ಯತೆ.

I. ಐತಿಹಾಸಿಕವಾಗಿ, ವನ್ಯಜೀವಿಗಳ ಮೇಲಿನ ಪರಿಣಾಮಗಳನ್ನು ಅಧ್ಯಾಯನಿಸುವ ತಜ್ಞರ ಮೌಲ್ಯಮಾಪನ ಸಮಿತಿಗಳು ಸೂಕ್ತಪರಿಣಿತಿಯನ್ನು ಹೊಂದಿರುವುದಿಲ್ಲ, ಮತ್ತು ಈ ಅಂಶವನ್ನು EIA ಪ್ರಕ್ರಿಯೆಯಲ್ಲಿ ನಿರ್ಲಕ್ಷಿಸಲಾಗುತ್ತಿದೆ. ಸಂರಕ್ಷಿತ ಪ್ರದೇಶಗಳನ್ನು ಸುತ್ತುವರೆದ ಭೂ ಪ್ರದೇಶಗಳಾದ ಕಾಡು ಮತ್ತು ಇತರೆ ನೈಸರ್ಗಿಕ ಜೀವವೈವಿಧ್ಯಕ್ಕೆ ಮಾರಕವಾಗುವ ಯೋಜನೆಗಳಿಗೆ ವನ್ಯಜೀವಿ ಸಂರಕ್ಷಣೆಯ ದೃಷ್ಟಿಕೋನದಿಂದ ಯಾವುದೇ ಮೌಲ್ಯಮಾಪನವಿರುವುದಿಲ್ಲ.

II. ಮೇಲ್ವಿಚಾರಣೆ ಅಗತ್ಯವಿರುವ ಒಂದು ನಿರ್ಣಾಯಕ ಪ್ರದೇಶವೆಂದರೆ ರೈಲ್ವೆ ಯೋಜನೆಗಳು. ರೈಲ್ವೆ ಯೋಜನೆಗಳು ವನ್ಯಜೀವಿಗಳು ಮತ್ತು ನೈಸರ್ಗಿಕ ಭೂದೃಶ್ಯಗಳ ಮೇಲೆ ಅಗಾಧ ಪರಿಣಾಮ ಬೀರುತ್ತವೆ. ಹುಲಿಗಳು, ಆನೆಗಳು, ಚಿರತೆಗಳಂತಹ ವನ್ಯಜೀವಿಗಳು ರೈಲುಗಳಿಗೆ ಡಿಕ್ಕಿ ಹೊಡೆಯುವುದರಿಂದ ಆಗಾಗ್ಗೆ ವನ್ಯಜೀವಿಗಳ ಸಾವು ಸಾಮಾನ್ಯವಾಗಿದೆ. ಉದಾಹರಣೆಗೆ, ರೈಲ್ವೆ ಸಚಿವಾಲಯವು ಲೋಕಸಭೆಯಲ್ಲಿ (ಜುಲೈ 2019) ಮಂಡಿಸಿದ ಅಂಕಿಅಂಶಗಳ ಪ್ರಕಾರ, 2016 ಮತ್ತು ಜೂನ್ 2019 ರ ನಡುವೆ ಒಟ್ಟು 65 ಆನೆಗಳು ರೈಲ್ವೆ ಅಪಘಾತಗಳಲ್ಲಿ ಸಾವನ್ನಪ್ಪಿವೆ. EIA ಪ್ರಕ್ರಿಯೆಯು ಇಂತಹ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ಜಾರಿಗೊಳಿಸಬೇಕಿರುತ್ತದೆ.

III. ಕೆಲವು ಯೋಜನೆಗಳನ್ನು ಬಿ-2 ಎಂದು ಮರುವರ್ಗೀಕರಿಸಲಾಗಿದೆ ಹಾಗೂ ಇದರಿಂದ ಪೂರ್ಣ ಮೌಲ್ಯ ಮಾಪನ ಮತ್ತು ಸಾರ್ವಜನಿಕ ವಿಚಾರಣೆಯಿಂದ ವಿನಾಯಿತಿ ಸಿಗುತ್ತದೆ. ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಎಕ್ಸಪ್ರೆಸ್ ವೇಗಳು, ಮಲ್ಟಿ-ಮೋಡಲ್ ಕಾರಿಡಾರ್‌ಗಳು ಮತ್ತು ಕೆಲವು ರಿಂಗ್ ರಸ್ತೆಗಳು ಮತ್ತು ವೈಮಾನಿಕ-ರೋಪ್ ವೇ ಯೋಜನೆಗಳ ವಿಸ್ತರಣೆ/ ಅಗಲೀಕರಣವನ್ನು ಒಳಗೊಂಡಂತೆ, ಅಧಿಸೂಚಿತ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿದ್ದರೂ ಸಾರ್ವಜನಿಕ ವಿಚಾರಣೆಯಿಂದ ವಿನಾಯಿತಿ ಸಿಗುವಂತಾಗುತ್ತದೆ. ಅನೇಕ ಸಂದರ್ಭಗಳಲ್ಲಿ, ಪ್ರಸ್ತುತ ಯೋಜನೆಗಳಿಗೆ ಸಂಬಂಧಿಸಿದ ಭೂಮಿಯು ಪರಿಸರ ವೈವಿಧ್ಯಕ್ಕೆ ಸೇರಿದ ಪ್ರಮುಖ ಪ್ರದೇಶಗಳು, ಕಾಡುಗಳು, ಗದ್ದೆಗಳು, ಹುಲ್ಲುಗಾವಲುಗಳು, ಪ್ರವಾಹ ಪ್ರದೇಶಗಳು ಮತ್ತು ಮರುಭೂಮಿಗಳನ್ನು ಒಳಗೊಂಡಿರುತ್ತದೆ. ಇವು ಸೂಕ್ಷ್ಮ ಪರಿಸರ ವ್ಯವಸ್ಥೆಗಳಾಗಿದ್ದು, ಯೋಜನೆ ನಿರ್ಮಾಣವು ವನ್ಯಜೀವಿಗಳ ಆವಾಸಸ್ಥಾನ ಮತ್ತು ಪರಿಸರ ವ್ಯವಸ್ಥೆಗಳ ಕಾರ್ಯಚಟುವಟಿಕೆಗೆ ಬದಲಾಯಿಸಲಾಗದ ಹಾನಿಯನ್ನುಂಟುಮಾಡುತ್ತದೆ.

IV. ಕರಡು ಅಧಿಸೂಚನೆಯು ಯೋಜನೆಯ ಪ್ರತಿಪಾದಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಹಾಗು ಉಲ್ಲಂಘನೆಯಾಗಿರುವ ಯೋಜನೆಯನ್ನು ಸ್ಥಗಿತಗೊಳಿಸುವ ಬದಲು ಉಲ್ಲಂಘನೆಗಳನ್ನು ಕ್ರಮಬದ್ಧಗೊಳಿಸುತ್ತದೆ. ಸಂರಕ್ಷಿತ ಪ್ರದೇಶಗಳಲ್ಲಿ ಅಥವಾ ಪರಿಸರ ಸೂಕ್ಷ್ಮ ವಲಯಗಳಲ್ಲಿ ಉಲ್ಲಂಘನೆಯಾದರೂ ನ್ಯಾಯಬದ್ದವೇ ಸರಿ.

V. EIA 2020 ಕರಡು ಅಧಿಸೂಚನೆಯು MoEFCC ಯಿಂದ ಸೂಚಿಸಲ್ಪಟ್ಟ ಪರಿಸರ ಸಂವೇದನಾಶೀಲ ವಲಯಗಳು ಮತ್ತು ಪ್ರದೇಶಗಳನ್ನು ಮಾತ್ರ ಒಳಗೊಂಡಿದೆ. ಇದು ಮೀಸಲು ಕಾಡುಗಳು ಮತ್ತು ಇತರ ಪರಿಸರೀಯವಾಗಿ ಬಹುಮುಖ್ಯವಾದ ಪ್ರದೇಶಗಳಾದ ಎತ್ತರದ ಪರಿಸರ ವ್ಯವಸ್ಥೆಗಳು, ಗದ್ದೆಗಳು, ಮರುಭೂಮಿಗಳು, ಪ್ರವಾಹ ಪ್ರದೇಶಗಳು, ಪೀಟ್ ಲ್ಯಾಂಡ್ಸ್, ಮ್ಯಾಂಗ್ರೋವ್, ಸೂಕ್ಷ್ಮ ಸಸ್ಯ ಮತ್ತು ಪ್ರಾಣಿ ಮತ್ತು ಜಲಾನಯನ ಪ್ರದೇಶಗಳ ಆವಾಸಸ್ಥಾನಗಳನ್ನು ಒಳಗೊಂಡಿರುವುದಿಲ್ಲ. ವನ್ಯಜೀವಿಗಳಿಗೆ ಅಪಾಯವನ್ನುಂಟುಮಾಡುವ ಈ ಪರಿಸರೀಯವಾಗಿ ಮಹತ್ವದ ಪ್ರದೇಶಗಳಲ್ಲಿ ಯೋಜನೆ ಕೈಗೊಳ್ಳಲು ಇದು ಅನುಮತಿ ನೀಡುತ್ತದೆ.

VI. 2020 ಕರಡು ಅಧಿಸೂಚನೆಯು "ಯಾವುದೇ ಮರ ಕಡಿಯದೆ ಭೂಮಿಯನ್ನು ಸಮಗೊಳಿಸುವ" ಚಟುವಟಿಕೆಗಳಿಗೆ ಅನುಮತಿಸುತ್ತದೆ. ಇದು ಹುಲ್ಲುಗಾವಲುಗಳು, ಗದ್ದೆಗಳು, ಮ್ಯಾಂಗ್ರೋವ್ ಮತ್ತು ಮರುಭೂಮಿಗಳಂತಹ ಅಳಿವಿನಂಚಿನಲ್ಲಿರುವ ಮತ್ತು ಪ್ರಮುಖ ಪರಿಸರ ವ್ಯವಸ್ಥೆಗಳನ್ನು ಬದಲಾಯಿಸಲಾಗದ ಹಾನಿಗೊಳಿಸುತ್ತದೆ. ಈವು ಅಳಿವಿನಂಚಿನಲ್ಲಿರುವ ಮತ್ತು ಶೆಡ್ಯೂಲ್-1 ಪ್ರಭೇದಗಳಾದ ಎರ್ಲಡ್ಡು, ಫಿಶಿಂಗ್ ಕ್ಯಾಟ್, ಇಂಡಿಯನ್ ತೋಳ, ಲೆಸ್ಸರ್ ಫ್ಲೋರಿಕಾನ್, ಒಟ್ಟರ್ಸ್ ಮತ್ತು ವಲಸೆ ನೀರಿನ ಕೋಳಿ ಮತ್ತು ಇತರೆ ಜೀವಗಳ ಕೊನೆಯ ಆವಾಸಸ್ಥಾನ ವಾಗಿರುತದೆ.

VII. ಸಂರಕ್ಷಿತ ಪ್ರದೇಶಗಳಲ್ಲಿ ಪ್ರಸ್ತಾಪಿಸಲಾದ ಯೋಜನೆಗಳಲ್ಲಿ 'ನಿರ್ಮಾಣ ಕಾರ್ಯ' ಎಂದು ಅರ್ಹತೆ ಪಡೆಯದ ಇಂತಹ ಚಟುವಟಿಕೆಗಳನ್ನು ಕೈಗೊಳ್ಳಬಹುದೇ ಎಂದು EIA 2020 ಕರಡು ಅಧಿಸೂಚನೆಯು ಸ್ಪಷ್ಟಪಡಿಸುವುದಿಲ್ಲ. ಇದು ಪರಿಸರ ಅನುಮೋದನೆ ನೀಡುವ ಮೊದಲೇ ಸಂರಕ್ಷಿತ ಪ್ರದೇಶಗಳಲ್ಲಿ ನಿರ್ಮಾಣ ಚಟುವಟಿಕೆಗಳನ್ನು ಪ್ರಾರಂಭಿಸಲು ಯೋಜನಾ ಪ್ರತಿಪಾದಕರು ಬಳಸಿಕೊಳ್ಳಬಹುದಾದ ಲೋಪದೋಷವಾಗಿದ್ದು, ದೇಶದ ಕೆಲವು ಅತ್ಯುತ್ತಮ ಸಂರಕ್ಷಿತ ನೈಸರ್ಗಿಕ ಆವಾಸಸ್ಥಾನಗಳು ಮತ್ತು ವನ್ಯಜೀವಿಗಳಿಗೆ ಬದಲಾಯಿಸಲಾಗದ ಹಾನಿಯನ್ನುಂಟುಮಾಡುತ್ತದೆ. ವನ್ಯಜೀವಿ ಮಂಡಳಿ ಅನುಮತಿ ಇಲ್ಲದೆ ಸಂರಕ್ಷಿತ ಪ್ರದೇಶಗಳಲ್ಲಿ ನಿರ್ಮಾಣವನ್ನು ಕೈಗೊಳ್ಳಲು ಕರಡು ಸ್ಪಷ್ಟವಾಗಿ ನಿರ್ಬಂಧಿಸುವುದಿಲ್ಲ, ಯೋಜನಾ ನಿರ್ಮಾಣವು ಒಮ್ಮೆ ಪ್ರಾರಂಭವಾದಾಗ ಅದು ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಉಲ್ಲಂಘಿಸಿದರೂ ಸಹ ಮುಂದುವರಿಯಬಹುದು.

VIII. ಹುಲಿಗಳು, ಆನೆಗಳು, ಚಿರತೆಗಳು, ಕರಡಿಗಳು ಮುಂತಾದ ವೈವಿಧ್ಯಮಯ ಪ್ರಭೇದಗಳನ್ನು ಒಳಗೊಂಡಂತೆ ಎಲ್ಲರನ್ನೂ ಬೆರಗುಗೊಳಿಸುವ ವೈವಿಧ್ಯತೆಗೆ ಭಾರತ ನೆಲೆಯಾಗಿದೆ, ಇದರ ವ್ಯಾಪ್ತಿಗಳು ಸಂರಕ್ಷಿತ ಪ್ರದೇಶಗಳನ್ನು ಮೀರಿ ವಿಸ್ತರಿಸುತ್ತವೆ ಮತ್ತು ಕೆಲವೊಮ್ಮೆ ಜನಬೀಡಿತ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಭಾರತದ ಕಾಡು ಆನೆಗಳ ಸಂಖ್ಯೆಯ ಮೂರನೇ ಒಂದು ಭಾಗವು ಸಂರಕ್ಷಿತ ಪ್ರದೇಶಗಳ ಹೊರಗಿದೆ. ಭಾರತದ 35-40 ರಷ್ಟು ಹುಲಿಗಳು ಸಂರಕ್ಷಿತ ಪ್ರದೇಶಗಳ ಹೊರಗೆ ಕಂಡುಬರುತ್ತವೆ ಮತ್ತು ಅವು ಶೋಷಣೀಯ ಸ್ಥಿತಿಯಲ್ಲಿವೆ. ಅಳಿವಿನಂಚಿನಲ್ಲಿರುವ ಇತರೆ ಪ್ರಭೇದಗಳಾದ ತೋಳಗಳು, ಚಿರತೆಗಳು, ಚೊಟ್ಟಿ ನವಿಲಕ್ಕಿ, ಎರ್ಲಡ್ಡುಗಳು ಸಹ ಸಂರಕ್ಷಿತ ಪ್ರದೇಶಗಳ ಹೊರಗೆ ಕಂಡುಬರುತ್ತವೆ. ಯಾವುದೇ ಪರಿಸರ ಪ್ರಭಾವದ ಮೌಲ್ಯಮಾಪನವು ವನ್ಯಜೀವಿಗಳು ಭೂದೃಶ್ಯಗಳ ವೈವಿಧ್ಯತೆಯಲ್ಲಿ ಕಂಡುಬರುತ್ತದೆ ಎಂಬುದನ್ನು ಒಪ್ಪಿಕೊಳ್ಳಬೇಕು ಮತ್ತು ಅಭಿವೃದ್ಧಿ ಯೋಜನೆಗಳು ಈ ಜನಸಂಖ್ಯೆಯ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬುದನ್ನು ಸಮಗ್ರವಾಗಿ ನಿರ್ಣಯಿಸಬೇಕು. ಕೆಲವು ಯೋಜನೆಗಳನ್ನು EIA ಅಗತ್ಯದಿಂದ ವಿನಾಯಿತಿ ನೀಡುವುದರಿಂದ ಭಾರತದ ಅಪರೂಪದ, ಅಳಿವಿನಂಚಿನಲ್ಲಿರುವ ವನ್ಯಜೀವಿಗಳನ್ನು ಕಳೆದುಕೊಳ್ಳುವಂತಾಗುತ್ತದೆ. EIA 2020 ಕರಡು ಅಧಿಸೂಚನೆಯು ಅದರ ಪ್ರಸ್ತುತ ರೂಪದಲ್ಲಿ ಜಾರಿಯಾದಲ್ಲಿ, ಸಂರಕ್ಷಿತ ಪ್ರದೇಶಗಳ ಹೊರಗಿನ ಈ ವನ್ಯಜೀವಿಗಳ ಆವಾಸಸ್ಥಾನಗಳಿಗೆ ಆಗಬಹುದಾದ ಹಾನಿ ಊಯಿಸಲು ಅಸಾಧ್ಯ.

ಕೋವಿಡ್-19 ಲಾಕ್ಡೌನ್ ಸಮಯದಲ್ಲಿ EIA 2020 ಕರಡು ಅಧಿಸೂಚನೆಯ ಕುರಿತು ಸಾರ್ವಜನಿಕ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿರುತದೆ. ದೇಶವು ಸಾಂಕ್ರಾಮಿಕ ಮತ್ತು ಮಾನವೀಯ ಬಿಕ್ಕಟ್ಟಿನಿಂದ ಬಳಲುತ್ತಿರುವ ಸಮಯದಲ್ಲಿ ಇದು ಸೂಕ್ತವಲ್ಲದದ್ದಾಗಿದೆ. ಪರಿಸರ ಸಮಸ್ಯೆಗಳು ಮತ್ತು ಮಾಲಿನ್ಯಕಾರಕ ಯೋಜನೆಗಳಿಂದ ನೇರವಾಗಿ ಪರಿಣಾಮ ಬೀರುವುದು ದುರ್ಬಲ ಸಮುದಾಯಗಳ ಮೇಲೆ, ಆದರೆ ಅವರು ಇಂದು ತಂತ್ರಜ್ಞಾನದ ಕೊರತೆ ಮತ್ತು ಸಂಪನ್ಮೂಲಗಳ ಕೊರತೆಯಿಂದಾಗಿ ತಮ್ಮ ನೋವು-ಸಂಕಟಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುತಿಲ್ಲ. ಈ ಪ್ರಸ್ತುತ ಕ್ರಮವು ಪಾರದರ್ಶಕತೆಯಿಂದ ಕೂಡಿಲ್ಲ ಮತ್ತು ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ದವಾಗಿದೆ.

ಹವಾಮಾನ ಬಿಕ್ಕಟ್ಟು ನಮ್ಮ ಸವಾಲುಗಳನ್ನು ಇನ್ನಷ್ಟು ಹದಗೆಡಿಸುತ್ತಿದೆ. ಜೂನ್ 2020ರಲ್ಲಿ ಬಿಡುಗಡೆಯಾದ ಭಾರತ ಸರ್ಕಾರದ ಭೂ ವಿಜ್ಞಾನ ಸಚಿವಾಲಯದ "ಭಾರತೀಯ ಪ್ರದೇಶದ ಮೇಲೆ ಹವಾಮಾನ ಬದಲಾವಣೆಯ ಮೌಲ್ಯಮಾಪನ" ಎಂಬ ಶೀರ್ಷಿಕೆಯುಳ್ಳ ವರದಿಯು ಎಚ್ಚರಿಸಿರುವುದೇನೆಂದರೆ: "ಭಾರತದ ಹವಾಮಾನದಲ್ಲಿನ ತ್ವರಿತ ಬದಲಾವಣೆಗಳು (ಹವಾಮಾನ

ಮಾದರಿಗಳಿಂದ) ದೇಶದ ನೈಸರ್ಗಿಕತೆಯ ಮೇಲೆ ಹೆಚ್ಚಿನ ಒತ್ತಡವನ್ನುಂಟು ಮಾಡುತ್ತದೆ. ಪರಿಸರ ವ್ಯವಸ್ಥೆಗಳು, ಕೃಷಿ ಉತ್ಪಾದನೆ, ಮತ್ತು ಸಿಹಿನೀರಿನ ಸಂಪನ್ಮೂಲಗಳು, ಮೂಲ ಸೌಕರ್ಯಗಳಿಗೆ ಹಾನಿಯನ್ನುಂಟು ಮಾಡುತ್ತವೆ. ಇವು ದೇಶದ ಜೀವವೈವಿಧ್ಯತೆ, ಆಹಾರ, ನೀರು ಮತ್ತು ಇಂಧನ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಗಂಭೀರ ಪರಿಣಾಮವಾಗುವುದನ್ನು ಸೂಚಿಸುತ್ತವೆ".

ಇಂತಹ ಕಠಿಣ ಸಮಯದಲ್ಲಿ, ನಾವು ಇಂತಹ ಸವಾಲುಗಳನ್ನು ಎದುರಿಸಲು ನಮ್ಮನ್ನು ನಾವು ಸಜ್ಜುಗೊಳಿಸುವ ಅವಶ್ಯಕತೆ ಇದೆ. ನಾವು ಪರಿಸರ ನಾಶ, ಜೀವವೈವಿಧ್ಯತೆಯ ಕಣ್ಮರೆ, ಪರಿಸರದ ಮೂಲ ತತ್ವಗಳ ಕುಸಿತಕ್ಕೆಕಾರಣವಾಗಬಾರದು, ನಮ್ಮ ಮುಂದಿನ ಪೀಳಿಗೆಯವರು ಸ್ವಚ್ಛಂದ ಪರಿಸರವನ್ನು ಅನುಭವಿಸಲು ರಕ್ಷಿಸಬೇಕಿರುತ್ತದೆ.

ಭಾರತೀಯ ಸಂವಿಧಾನದ 51ಎ (ಜಿ) ವಿಧಿಯು, "ಕಾಡುಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ, ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಸುಧಾರಿಸುವುದು ಹಾಗೂ ಜೀವಿಗಳ ಬಗ್ಗೆ ಸಹಾನುಭೂತಿ ಹೊಂದಿರುವುದು" ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯವಾಗಿದೆ ಎಂದು ಆದೇಶಿಸುತ್ತದೆ. ಆಶ್ಚರ್ಯಕರ ಸಂಗತಿಯೆಂದರೆ, ಪರಿಸರ ಸಚಿವಾಲಯವು EIA ಕಾನೂನಿನ ಈ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆನ್ನುವುದನ್ನು ಮರೆತಂತೆ ಕಾಣುತ್ತದೆ.

ಮೇಲೆ ತಿಳಿಸಿರುವ ಕಾಳಜಿಗಳ ಅನುಸಾರ, EIA 2020 ರ ಕರಡು ಅಧಿಸೂಚನೆಯನ್ನು ಹಿಂಪಡೆಯಬೇಕೆಂದು ಮತ್ತು ರದ್ದುಗೊಳಿಸಬೇಕೆಂದು ನಾವು MoEFCC ಗೆ ವಿನಂತಿಸುತ್ತೇವೆ. ಮುನ್ನೆಚ್ಚರಿಕೆ ತತ್ವವನ್ನು ಒಳಗೊಂಡಿರುವ ಪರಿಸರ ನ್ಯಾಯಶಾಸ್ತ್ರದ ತತ್ವಗಳನ್ನು ಅದು ಎತ್ತಿ ಹಿಡಿಯುವ ಸಲುವಾಗಿ ಮತ್ತು EIA 2006ರ ಅಧಿಸೂಚನೆಯನ್ನು ಬಲಪಡಿಸುವುದು ಈ ಸಮಯದಲ್ಲಿ ಸೂಕ್ತವೆನಿಸುತ್ತದೆ.

ಈ ಪತ್ರವನ್ನು ದಯವಿಟ್ಟು ಸ್ವೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ತಮ್ಮ ವಿಶ್ವಾಸಿ

<u>ರಾಷ್ಟ್ರೀಯ ವನ್ಯಜೀವಿ ಮಂಡಳಿ, ಅರಣ್ಯ ಸಲಹಾ ಸಮಿತಿ, ಹುಲಿ ಯೋಜನೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ರಾಜ್ಯ ವನ್ಯಜೀವಿ ಮಂಡಳಿಗಳ ಮಾಜಿ ಸದಸ್ಯರು</u>

1. A.J.T. Johnsingh, PhD, Former member, National Board for Wildlife.
Email: ajt.johnsingh@gmail.com
2. Aparajita Datta, PhD, Senior Scientist, Nature Conservation Foundation; Former Member, State Board for Wildlife, Arunachal Pradesh; Former Member, NTCA
Email: aparajita@ncf-india.org
3. Asad Rahmani, PhD (Former Director, Bombay Natural History Society), Scientific Adviser, The Corbett Foundation
Email: rahmani1.asad@gmail.com
4. Biswajit Mohanty, PhD, Former Member, National Board for Wildlife; Secretary, Wildlife Society of Orissa
Email: kachhapa@gmail.com
5. Bittu Sahgal, Editor, Sanctuary Asia; Former Member, National Board for Wildlife.
Email: bittu@sanctuaryasia.com
6. Bonani Kakkar, Former Member, National Board for Wildlife; Founder Member, People United for Better Living in Calcutta (PUBLIC)
Email: public4calcutta@gmail.com
7. Kishore Rithe, Former Member, National Board for Wildlife; Founder, Satpuda Foundation.
Email: rithekishore@gmail.com
8.Meetu Gupta, Member, State Board for Wildlife, Chhattisgarh; Founder Member & Secretary, Conservation Core Society.
Email: conservationcoreindia@gmail.com
9. M Firoz Ahmed, PhD, Scientist F, Aaranyak, Guwahati, Assam; Former Member of the FAC and NTCA, MoEFCC, GoI.
Email: mfa.aaranyak@gmail.com

10. MK Ranjitsinh, PhD, Former Additional Secretary, Ministry of Environment and Forests; Director, Wild Preservation, India
Email: mkranjitsinh@gmail.com
11. Nirmal Kulkarni, Herpetologist, Director, Mhadei Research Center; Member, Goa State Biodiversity Board; Former Member, State Board for Wildlife, Goa
Email: ophidian_nirmal@yahoo.co.in
12. PK Sen, Former Director, Project Tiger
Email: 1941sen@gmail.com
13. Priya Davidar, PhD, Fellow, American Association for the Advancement of Science. Professor (Retired), Pondicherry University. Former member, Tamil Nadu State Wildlife Board
Email: pdavidar@gmail.com
14. Prerna Singh Bindra, Author and Wildlife Conservationist, Former Member, Standing Committee-National Board for Wildlife
Email: bindra.prerna@gmail.com
15.Romulus Whitaker, Co-founder/Trustee, Centre for Herpetology/Madras Crocodile Bank and Agumbe Rainforest Research Station. Former Member, Tamil Nadu State Wildlife Board.
Email: kingcobra@gmail.com
16. Shekar Dattatri, Former Member, National Board for Wildlife
Email: shekar.dattatri@gmail.com

## ಸಂಶೋಧಕರು, ಪರಿಸರ ಸಂರಕ್ಷಣಾವಾದಿಗಳು ಮತ್ತು ವೃತ್ತಿಪರರು

17. Madhu Bhaduri, Indian Foreign Service, Former Ambassador of India
mail: madhu.bhaduri@gmail.com
18. Amit Bhaduri, Former Professor emeritus at JNU.
Email: amit.bhaduri@gmail.com
19. M D Madhusudan, Independent Researcher,
Email: mdmadhu@gmail.com
20. Nilanjana S Roy, writer
Email: nilanjanasroy@gmail.com
21. Cara Tejpal, Sanctuary Nature Foundation
Email: caratejpal@gmail.com
22. Pradip Krishen, Writer, ecological restorer
Email: treesofdelhi@gmail.com
23. Brinda Dubey, Secretary, Tiger Haven Society.
Email: brinda.dubey@gmail.com
24. Jairaj Singh, Chairman, Tiger Haven Society
Email: tigerhavensociety@gmail.com
25. Joanna Van Gruisen, Wildlife photographer and Writer
Email: joannavg@gmail.com
26. Raghu Chundawat, Conservation biologist
Email: raghu.baavan@gmail.com
27. Vaishali Rawat, Writer and Conservationist
Email: vaishali.rawat@gmail.com
28. Sumantha Ghosh, Founder, Vanghat
Email: vanghat@gmail.com
29. Nityanand Jayaraman, Writer, Social Activist. Chennai Solidarity Group
Email: nityjayaraman@gmail.com
30. Vishal Sinha, Advocate, Supreme Court of India
Email: vishalfkt@gmail.com
31. Meera Rajesh , Works on restoration of degraded land
Email: meera.rajesh@gmail.com
32. Pranav Capila, Independent Writer and Editor
Email: pranav@secondskin.media
33. Sonia Jabbar, Tea Planter & Conservationist, Nuxalbari Tea Estate, West Bengal
Email: s.jabbar@icloud.com
34. Meghna Banerjee, Executive Director and CEO, Human & Environment Alliance League (HEAL)

Email: banerjee.meghna5@gmail.com
35. Aditya Chandra Panda, Naturalist & Wildlife Conservationist
Email: aditya.spiritofthewild@gmail.com
36. Alok Putul, Journalist, BBC
Email: alokputul@gmail.com
37. Shailendra Singh, PhD, Director (India Program) Turtle Survival Alliance
Email: shai@turtlesurvival.org
38. Anuradha Sehgal, Animal Rights Activist
Email: Anuradha.sehgal@hindustantimes.com
39. Diya Banerjee, Advisor, Human & Environment Alliance League
Email: banerjee.diya@gmail.com
40. M. Yuvan, Independent writer and researcher, Executive Committee - Madras Naturalists' Society
Email: yuvan.aves@gmail.com
41. Shailendra Yashwant, Independent Journalist
Email: shaiyashwant@gmail.com
42.Nandini Velho, PhD, Alumna of the Earth Institute Fellowship, Columbia University.
Email: nandinivelho@gmail.com
43. Sahil Nijhawan, PhD, Independent scholar
Email: sahil.nsit@gmail.com
44. Anisha Jayadevan, Ecologist
Email: anisha.jayadevan@gmail.com
45. Pooja Choksi, PhD Candidate, Columbia University, New York
Email: poojamchoksi@gmail.com
46. Dincy Mariyam, PhD Candidate
Email: dincy.mariyam@gmail.com
47. Arjun Srivathsa, PhD candidate, Wildlife Biologist, University of Florida
Email: asrivathsa@ufl.edu
48. Aritra Kshettry, INSPIRE-Fellow, Department of Science and Technology
Email: aritra.kshettry@gmail.com
49. DV Girish, Wildlife Conservation Activist & Managing Trustee, Bhadra Wildlife Conservation Trust, Chikkamagalauru.
Email: girish422@gmail.com
50. Shreedev Hulikere, Wildlife Conservationist & Managing Trustee, WildCAT-C, Chikkamagalauru
Email: shreedevhulikere@gmail.com
51. Mrunmayee, Wildlife Conservationist, Chikkamagalauru
Email: mrunmayee.amarnath@gmail.com
52.Bijal Vachharajani, children's book author
Email: bijal.tob@gmail.com
53. Girish Punjabi, Wildlife Biologist
Email: girisharjunpunjabi@gmail.com
54. Sikha Hariharan, Research Fellow
Email: sikha.hariharan@gmail.com
55. Raza Kazmi, Independent Writer and Wildlife Historian.
Email: raza.kazmi17@gmail.com
56. Krishnapriya Tamma, Researcher
Email: priya.tamma@gmail.com
57. Priya Singh, Independent Researcher Email:
karnisar@gmail.com
58. Vena Kapoor, Ecologist, Nature Educator Email:
vena.kapoor@gmail.com
59. Pradeep Koulgi, Wildlife biologist, Independent researcher
Email: pradeep.koulgi@gmail.com
60. Mahi Puri, PhD candidate, Wildlife biologist, University of Florida
Email: mahi.puri@gmail.com
61. Prerna Agarwal, Independent researcher Email:
prernaagarwal17@gmail.com
62. Omkar Dharwadkar, Naturalist Email:
omkardhr_27@yahoo.in

63. Anindya Sinha, Professor and Wildlife Biologist, National Institute of Advanced Studies
Email: anindya.rana.sinha@gmail.com
64. Shreya Padukone, Research Associate, NALSAR University of Law
Email: shreya.padukone@gmail.com
65. Arjun Kamdar, National Centre for Biological Sciences, Bangalore
Email: arjunk@ncbs.res.in
66. H S Sathya Chandra Sagar, Indian Institute of Science, Bengaluru
Email: sathyachandrasagar@gmail.com
67. Abhishek Jamalabad, Researcher
Email: abhishek.jamalabad@gmail.com
68. Sutirtha Lahiri, Researcher, IISER Pune Email:
sutirtha1996@gmail.com
69. Ghanashyam GC, Wildlife Conservationist, Chikkamagalauru
Email: ghanuiyer@gmail.com
70. Dhee, Independent Researcher Email:
finddhee@gmail.com
71. Umesh Srinivasan, Assistant Professor, IISc Email:
umeshs@iisc.ac.in
72. Rohan K. Menzies, Researcher, Nature Conservation Foundation
Email: rohanmenzies@ncf-india.org
73. Ritobroto Chanda, MSc Project Student, IISER Tirupati/BVIEER Pune
Email: ritobrotochanda@gmail.com
74. Veera Mahuli, Lawyer
Email: veerasmahuli@gmail.com
75. Rohit Chakravarty, PhD student and bat researcher, Leibniz Institute for Zoo and Wildlife Research, Germany
Email: rohit.chakravarty77@gmail.com
76. Viril Stephen Serrao, MSc project Student, Wildlife Trust of India/BVIEER Pune
Email: virilserrao@gmail.com
77. Leona M Bhuyan, MSc Environmental Sustainability, University of Edinburgh, UK
Email: leonambhuyan@gmail.com
78. Rajeev G C, Software Engineer and Wildlife Conservationist, Chikkamagalauru
Email: rajeevgc@gmail.com
79. Pritha Dey, PhD, Moth biologist, Centre for Ecological Sciences, Indian Institute of Science
Email: dey.pritha126@gmail.com
80. Chintan Sheth, Independent Researcher Email:
chintz604@gmail.com
81. Shivangi Jain, Duke University, Master of Environmental Management
Email: shivangi.jain@duke.edu
82. Rohan Arthur, PhD, Scientist, Nature Conservation Foundation,
Email: rohan@ncf-india.org
83. Vishnupriya Sankararaman, PhD candidate, Penn State University
Email: vus85@psu.edu
84. Rohan Chakravarty, Cartoonist
Email: rohanchakcartoonist@gmail.com
85. Amandeep Kaur Bamrah, Nature Educator, Sanctuary Nature Foundation
Email: amandeepkaurgiran@gmail.com
86. Parvathi K. Prasad, Researcher Email:
parvathi68@gmail.com
87. Hycintha Aguiar, Researcher, BMC Chairperson Goltim Navelim, Goa
Email: a.hycie@gmail.com
88. Arjan Basu Roy, Secretary, Nature Mates Nature Club
Email: naturemates@gmail.com
89. Rithika Fernandes, Ecologist
Email: rithikafernandes@gmail.com
90. Malaika Vaz, Wildlife Presenter and Filmmaker
Email: malaikavaz1@gmail.com
91. Kasturi Saha, PhD student, Center for Ecological Sciences, Indian Institute of Science

Email: kasturisaha@iisc.ac.in
92. Harish Prakash, PhD, Research Associate, Centre for Ecological Sciences, Indian Institute of Science
Email: harishp@iisc.ac.in
93. Sayan Banerjee, PhD student, National Institute of Advanced Studies, Bengaluru
Email: sayan.workspace@gmail.com
94. Priyank Das, MSc Student, SACON Email:
gemini20rimi@gmail.com
95. Shaleen Attre, Wildlife Conservationist Email:
shaleen.attre6@gmail.com
96. Swathi H A, MSc Student, University of Mysore
Email: swathih.a8@gmail.com
97. Manidip Mandal, JRF, ICAR-NBAIR
Email: m.manidip1295@gmail.com
98. Tiasa Adhya, Conservationist, Nari Shakti Puruskar Awardee, 2016
Email: adhyatiasa@yahoo.com
99. Rutuja Dhamale, Researcher
Email: rutuja.dhamale@gmail.com
100. Anup Prakash B, Wildlife biologist Email:
anup.b.prakash@gmail.com
101. Sujan Chatterjee Birdwatcher's Society
Email: birdwatcherssocietyofbengal@gmail.com
102. Mandip Singh Soin, FRGS, Mountaineer, Explorer & Ecotourism specialist
Email: mandipsinghsoin@gmail.com
103. Malaika Mathew Chawla, MSc student, James Cook University, Australia
Email: malaika.chawla@my.jcu.edu.au
104. Subhashini Krishnan, Science teacher Email:
subhashinik009@gmail.com
105. Udisha Saklani, PhD Student, Department of Geography, University of Cambridge
Email: us267@cam.ac.uk
106. Satyajeet Gupta, PhD student, Center for Ecological Sciences, Indian Institute of Science
Email: satyajeetg@iisc.ac.in
107. Pooja Pawar, Research Affiliate, Nature Conservation Foundation, Mysore
Email: pooja@ncf-india.org
108. Ramki Sreenivasan, Conservation India
Email: frogmouth@gmail.com

ಲಗತ್ತಿಸಲಾಗಿದೆ:

1) ಸಚಿವರು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ,

2) ರಾಜ್ಯ ಸಚಿವರು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ,

3) ಕಾರ್ಯದರ್ಶಿ, (ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ)

4) ಅರಣ್ಯ ಮಹಾನಿರ್ದೇಶಕರು ಮತ್ತು ವಿಶೇಷ ಕಾರ್ಯದರ್ಶಿ,

5) ಹೆಚ್ಚುವರಿ ಅರಣ್ಯ ಮಹಾನಿರ್ದೇಶಕರು (ಅರಣ್ಯ ಸಂರಕ್ಷಣೆ),

6) ಹೆಚ್ಚುವರಿ ಮಹಾನಿರ್ದೇಶಕರು (ವನ್ಯಜೀವಿ),

7) ನಿರ್ದೇಶಕರು, ವೈಲ್ಡ್‌ಲೈಫ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ.

**---**